ಊಬರ್ ಡ್ರೈವರ್ ನಟನ ಮಗನ ಪಬ್ಲಿಕ್ ಪ್ರೊಫೈಲಿಗೆ ಟ್ಯಾಗ್ ಮಾಡಿದೆ.

ಇವಳು, 'ಸೈನ್ಸ್ ಪ್ರಾಜೆಕ್ಟ್ ನೋಡು ಅಂದರೆ ಮಾಡೋಕೆ ಬೇರೆ ಕೆಲಸ ಇಲ್ಲವಾ ನಿನಗೆ, ಈ ಊರುದ್ಧಾರ ಮಾಡೋ ಕೆಲಸಾನ ಕಮ್ಮಿ ಮಾಡಿ ಮನೆ ನೋಡಬಾರದಾ' ಎಂದು ನನ್ನ ಲ್ಯಾಪ್‌ಟಾಪನ್ನು ಕಸಿದುಕೊಂಡು ತಾನೇ ನೋಡಕ್ಕೆ ಶುರುಮಾಡಿದಳು.

ರೂಮಿನಲ್ಲಿ ಏನೋ ಧಡ್ ಅಂತ ಶಬ್ದವಾಯಿತು. ನೋಡಿದರೆ ಪುಟ್ಟ ಆತನ ಸೈನ್ಸ್ ಪ್ರಾಜೆಕ್ಟಿಗೆ ಎಂದು ತಂದಿದ್ದ ಮೂರುಮಡಿಕೆಯ ರಟ್ಟಿನ ಬೋರ್ಡಿನ ಮೇಲೆ ಗೋಂದಿನ ಬಾಟಲನ್ನು ಚೆಲ್ಲಿದ್ದ. ಬರೀ ಚೆಲ್ಲಿದ್ದಷ್ಟೇ ಅಲ್ಲ, ಅದನ್ನು ನಮ್ಮ ಕಣ್ತಪ್ಪಿಸಿ ಶುಚಿಮಾಡಲು ಹೋಗಿ ಆತನ ರೂಮಿನ ಕಾರ್ಪೆಟ್ಟೆಲ್ಲಾ ಗೋಂದು ಹರಡಿ ರಾಡಿಯಾಗಿಹೋಗಿತ್ತು. 'ಒಂದೇ ಒಂದು ಕೆಲಸಾನೂ ನೀಟಾಗಿ ಮಾಡೋಕೆ ಬರಲ್ಲ, ಹಾಳಾದವನೇ' ಎಂದು ಕೂತಲ್ಲಿಯೇ ಕೂಗಿದಳು. ನಾನು ಹೋಗಿ ಆತನ ರೂಮಿನಲ್ಲಿ ಡ್ಯಾಮೇಜೆಷ್ಟಾಗಿದೆ ಅಂತ ನೋಡಿದೆ. ರಟ್ಟಿನ ಬೋರ್ಡು ಮುರಿದಿದ್ದರೆ ಹಾಳಾಗಿಹೋಗಲಿ, ರೂಮಿನಲ್ಲಿದ್ದ ಪುಸ್ತಕದ ಕಪಾಟಿನ ಮೇಲೆಲ್ಲ ಗೋಂದು. ಅದನ್ನು ತೆಗೆದು ಶುಚಿಗೊಳಿಸಲು ಹೋದಾಗ ಕಪಾಟಿಗೆ ಹಚ್ಚಿದ್ದ ವಾರ್ನಿಶ್ ಕೈಗೆ ಬಂತು. ಕಾರ್ಪೆಟ್ ಮೇಲಿನ ಗೋಂದು ತೆಗೆಯಲು ಹೋದಾಗ ಕಾರ್ಪೆಟ್ಟಿನ ತುಂಡುಗಳು ಪದರಪದರವಾಗಿ ಬಿಚ್ಚಿಗೊಂಡವು. ಕಪಾಟಿನ ವಾರ್ನಿಶ್ಶು, ಕಾರ್ಪೆಟ್ಟು ಎಲ್ಲ ಸೇರಿ ಏನಿಲ್ಲ ಅಂದರೂ ಒಂದು ಸಾವಿರ ಡಾಲರ್ ಆದರೂ ಕೈಬಿಡುತ್ತದೆ ಎನಿಸಿತು. 'ಎಂಥದಿದೋ ಪುಟ್ಟ, ನಿನಗೇನು ಕಮ್ಮಿ ವಯಸ್ಸಾಯಿತಾ. ಒಂದು ಸಣ್ಣ ಕೆಲಸ ಮಾಡು ಅಂದ್ರೆ ನಮ್ಮ ಕುತ್ತಿಗೆಗೇ ಬರುತ್ತೆ. ಹಿಂಗೇ ಆದರೆ ದೊಡ್ಡವನಾದ ಮೇಲೆ ಏನಾಗ್ತೀಯೋ. ನೀನೂ ಊಬರ್ ಗೀಬರ್ ಓಡಿಸಿಕೊಂಡಿರ್ತೀಯೋ ಏನೋ?' ಎಂದೆ.

ನನ್ನ ಬಾಯಲ್ಲಿ ಈ ಮಾತು ಬಂತಾ ಎಂದೂ ಕೂಡ ನನಗೆ ಆಶ್ಚರ್ಯವಾಗಲಿಲ್ಲ. ಜೇಬಿನಲ್ಲಿದ್ದ ಸಣ್ಣ ಫೋನು ಟಣ್ ಟಣ್ ಟಣ್ ಎಂದು ನೋಟಿಫಿಕೇಶನ್‌ಗಳು ಬರುತ್ತಿವೆ ಎಂದು ಹೇಳುತ್ತಲೇ ಇದ್ದವು. ತೆಗೆದು ನೋಡಿದಾಗ ಆ ನಟನ ಮಗ ನನಗೆ ಫ್ರೆಂಡ್ ರಿಕ್ವೆಸ್ಟ್ ಕಳಿಸಿದ್ದ. ಎಪ್ಪತ್ತೈದು ಲೈಕುಗಳಿದ್ದವು. ಎಂಟುಜನ ಶೇರು ಮಾಡಿದ್ದರು.

ಬೈಗುಳ ನಿಂತಿದ್ದು ಯಾಕೆ ಎಂದು ಅರ್ಥವಾಗದೇ ಪುಟ್ಟ ಬೆಪ್ಪಾಗಿ ನಿಂತಿದ್ದ.

## ಗುರುಪ್ರಸಾದ ಕಾಗಿನೆಲೆ

ಹುಟ್ಟಿದ್ದು ಶಿವಮೊಗ್ಗ. ಬೆಳೆದದ್ದು ಮೈಸೂರು ಮತ್ತು ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ. ಬಳ್ಳಾರಿಯ ಸರಕಾರಿ ವೈದ್ಯಕೀಯ ವಿದ್ಯಾಲಯದಲ್ಲಿ ಎಂಬಿಬಿಎಸ್ ಮತ್ತು ಎಂಡಿ ಪದವಿ. ಡೆಟ್ರಾಯ್ಟ್‌ನ ವೇಯ್ನ್ ಸ್ಟೇಟ್ ವಿಶ್ವವಿದ್ಯಾನಿಲಯ ಹಾಗೂ ವಿಸ್ಕಾನ್ಸಿನ್ ವಿಶ್ವವಿದ್ಯಾಲಯಗಳಲ್ಲಿ ತರಬೇತಿ. ಸದ್ಯಕ್ಕೆ ಮಿನೆಸೋಟಾ ರಾಜ್ಯದ ರಾಚೆಸ್ಟರ್‌ನಲ್ಲಿ ವಾಸ. ನಾರ್ತ್ ಮೆಮೊರಿಯಲ್ ಆಸ್ಪತ್ರೆಯ ಎಮರ್ಜೆನ್ಸಿ ಮೆಡಿಸಿನ್ ವಿಭಾಗದಲ್ಲಿ ವೈದ್ಯನಾಗಿ ಕೆಲಸ.

ಪ್ರಕಟಿತ ಕೃತಿಗಳು: 'ನಿರ್ಗುಣ' ಕಥಾಸಂಕಲನ, 'ವೈದ್ಯ, ಮತ್ತೊಬ್ಬ' ಲೇಖನ ಸಂಗ್ರಹ ಮತ್ತು 'ಗುಣ' ಕಾದಂಬರಿ. ಸಂಪಾದಿತ ಕಥಾಸಂಕಲನ 'ಆಚೀಚೆಯ ಕಥೆಗಳು'. ಇತ್ತೀಚಿನ ಕಾದಂಬರಿ 'ಹಿಜಾಬ್'.